ಇಂದು ದಿ: **23.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿಗಳ ಪರ:ಶ್ರಿ ಎಂ ಎಸ್ ಎಸ್, ವಕೀಲರಿಂದ.

1953 ನೇ ಇಸವಿಯಲ್ಲಿ ನಾನು ಹುಟ್ಟಿರಲಿಲ್ಲ ಎನ್ನುವುದು ನಿಜ. ನಾನು 1959 ರಲ್ಲಿ ಹುಟ್ಟಿರುತ್ತೇನೆ. 1953 ರಲ್ಲಿ ಪಾಲುಪಟ್ಟಿಯನ್ನು ಯಾರು, ಎಲ್ಲಿ ಬರವಣಿಗೆ ಮಾಡಿರುತ್ತಾರೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎನ್ನುವುದು ನಿಜ. ಬೋಗಪ್ಪನ ಮೊದಲನೇ ಹೆಂಡತಿ ಕರಿಯಮ್ಮಳ ಮಗ ತಿಮ್ಮಪ್ಪ ಎನ್ನುವುದಕ್ಕೆ ಪಾಲುಪಟ್ಟಿಯ ಛಾಯಾಪ್ರತಿಯನ್ನು ಹಾಜರುಪಡಿಸಿರುತ್ತೇವೆ. ಸದರಿ ಪಾಲುಪಟ್ಟಿ ನಮ್ಮ ತಂದೆಯವರ ಬಳಿ ಇತ್ತು. ಮೂಲಪ್ರತಿ ತಿಮ್ಮಪ್ಪನ ಮಕ್ಕಳಾದ 9 ರಿಂದ 11 ನೇ ಪ್ರತಿವಾದಿಗಳ ಬಳಿ ಇರುತ್ತದೆ. ಸದರಿ ಮೂಲ ಪಾಲುಪಟ್ಟಿಯನ್ನು ಹಾಜರುಪಡಿಸಲು ನಾವು ಕ್ರಮ ತೆಗೆದುಕೊಂಡಿಲ್ಲ. ತಿಮ್ಮಪ್ಪನ ಭಾಗದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎನ್ನುವುದು ನಿಜ. ದಾವಾ ಆಸ್ತಿಗಳಿಗೂ 9 ರಿಂದ 11 ನೇ ಪ್ರತಿವಾದಿಗಳಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎನ್ನುವುದು ನಿಜ. ದಾವಾ ಆಸ್ತಿಗಳು ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ ಇವರಿಗೆ ಸೇರದ ಸ್ವತ್ತುಗಳು ಎನ್ನುವುದು ನಿಜ.

1 ನೇ ಪ್ರತಿವಾದಿ ಖರೀದಿಸಿದ ಆಸ್ತಿಗಳು ಈ ದಾವೆಯಲ್ಲಿ ಇರುತ್ತವೆ. ಅವುಗಳು ಸರ್ವೆ ನಂ.112 ರಲ್ಲಿ ವಿಸ್ತೀರ್ಣ 1 ಎಕರೆ 8 ಗುಂಟೆ, ಸರ್ವೆ ನಂ. 48 ರಲ್ಲಿ ವಿಸ್ತೀರ್ಣ 1 ಎಕರೆ, ಸರ್ವೆ ನಂ. 140 ವಿಸ್ತೀರ್ಣ 10 ಗುಂಟೆ, ಸರ್ವೆ ನಂ. 53 ವಿಸ್ತೀರ್ಣ 15 ಗುಂಟೆ ಇರುತ್ತವೆ. 1 ನೇ ಪ್ರತಿವಾದಿ ಹಾಗೂ ನಮ್ಮ ತಂದೆ ಸೇರಿ ಜಂಟಿಯಾಗಿ ದಾವಾ 64 ಮತ್ತು 65 ನೇ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಗಳನ್ನು ಕ್ರಯಕ್ಕೆ ತೆಗೆದುಕೊಂಡು ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ಬೋಕಿಕೆರೆ ಗ್ರಾಮದ ಸರ್ವೆ ನಂ. 79/1 ವಿಸ್ತೀರ್ಣ 10 ಎಕರೆ 17 ಗುಂಟೆ ಖರಾಬು ಜಾತಾ 10 ಎಕರೆ 9 ಗುಂಟೆ ಪಾಲು ವಿಭಾಗದಲ್ಲಿ 4 ಜನರಿಗೆ ಹೋಗಿರುತ್ತದೆ. ಸದರಿ ಆಸ್ತಿ ಮೊದಲು ಸಿದ್ದಜ್ಜಿ ಇವಳ ಹೆಸರಿನಲ್ಲಿ ಇತ್ತು, ಅವಳು ಮೃತಪಟ್ಟ ನಂತರ ತಿಮ್ಮಪ್ಪನೆ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. 1953 ರ ಪಾಲು ಪಟ್ಟಿಯಂತೆ ಸಿದ್ದಜ್ಜಿ ಜೀವಂತ ಇದ್ದ ಕಾರಣ ಸದರಿ ಆಸ್ತಿಯ ಖಾತೆ ಆಗಿಲ್ಲ. 1953 ರಲ್ಲಿ ಸಿದ್ದಜ್ಜಿ ಜೀವಂತ ಇದ್ದಳು. ಪಾಲುಪಾರಿಕತ್ತಿನಲ್ಲಿ ಸಿದ್ದಜ್ಜಿಯ ಜೀವನಾಂಶಕ್ಕೆ ಎಂದು ಸರ್ವೆ ನಂ. 79 ರಲ್ಲಿ ಮತ್ತು ಚನ್ನಸಮುದ್ರದ ಸರ್ವೆ ನಂ. 36 ರಲ್ಲಿ ಆಸ್ತಿಯನ್ನು ಬರೆದಿರುತ್ತಾರೆ. ಆದರೆ ಸದರಿ ಆಸ್ತಿಗಳ ವಿಸ್ತೀರ್ಣವನ್ನು ನಮೂದು ಮಾಡಿಲ್ಲ. 1967 ರಲ್ಲಿ ಸಿದ್ದಜ್ಜಿ ಮೃತಪಟ್ಟಿರುತ್ತಾಳೆ. ಸದರಿ ಸಿದ್ದಜ್ಜಿಯ ಮರಣ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ಸದರಿ ಮರಣ ಪ್ರಮಾಣ ಪತ್ರವನ್ನು ತೆಗೆದುಕೊಂಡು ಹಾಜರುಮಾಡಲು ತೊಂದರೆ ಇಲ್ಲ ಎನ್ನುವುದು ನಿಜ. ಕೆಂಗಜ್ಜಿ ಇವಳಿಗೆ ಸರ್ವೆ ನಂ. 79 ಮತ್ತು ಚನ್ನಸಮುದ್ರ ಸರ್ವೆ ನಂ. 36 ರಲ್ಲಿ ಜೀವನಾಂಶಕ್ಕೆ ಬಿಟ್ಟಿದ್ದರು. ಸದರಿ ಕೆಂಗಜ್ಜಿ ಮತ್ತು ಸಿದ್ದಜ್ಜಿ ಯಾವುದೇ ಪತ್ರವನ್ನು ಯಾರಿಗೂ ಬರೆದುಕೊಟ್ಟಿಲ್ಲ ಎನ್ನುವುದು ನಿಜ. ಪಾಲುಪಾರಿಕತ್ ಆಗದೆ ಇರುವ ಕಾರಣ, ಆ ರೀತಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ಅದರಂತೆ ಸಿದ್ದಜಿ ಮತ್ತು ಕೆಂಗಜ್ಜಿ ಇವರ ಹೆಸರಿಗೆ ಖಾತೆ ವರ್ಗಾವಣೆ ಆಗಿಲ್ಲ. ಸಿದ್ದಜಿ ಮತ್ತು ಕೆಂಗಜ್ಜಿ ಇವರಿಗೆ ಜೀವನಾಂಶಕ್ಕೆ ಆಸ್ತಿಗಳನ್ನು ಬಿಟ್ಟಿತ್ತು ಎನ್ನುವುದನ್ನು ನಮ್ಮ ಲಿಖಿತ ಹೇಳಿಕೆ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ.

ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ ಇವರಿಗೆ ಆಸ್ತಿಗಳನ್ನು ಖರೀದಿಸಲು ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸಾಕ್ಷಿ ಹೈನುಗಾರಿಕೆಯಿಂದ ಆದಾಯ ಬರುತ್ತಿತ್ತು ಎಂದು ಹೇಳುತ್ತಾರೆ. ಅವರು ಹೈನುಗಾರಿಕೆ ಮತ್ತು ಕುರಿಸಾಗಾಣಿಕೆ ಮಾಡುತ್ತಿದ್ದ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ. ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ ಇವರು ಪ್ರತ್ಯೇಕವಾಗಿ ಹೈನುಗಾರಿಕೆ ಮತ್ತು ಕುರಿಸಾಗಾಣಿಕೆ ಮಾಡುತ್ತಿದ್ದರು. 1953 ರ ನಂತರ ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ ಒಟ್ಟಿಗೆ ಇರಲಿಲ್ಲ. ಹೈನುಗಾರಿಕೆ ಮತ್ತು ಕುರಿಸಾಗಾಣಿಕೆಯಿಂದ ಆ ಮೂರು ಜನರಿಗೂ ಆದಾಯ ಬರುತ್ತಿತ್ತು ಎನ್ನುವುದನ್ನು ಲಿಖಿತ ಹೇಳಿಕೆ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. 3 ಜನರು ಒಟ್ಟಾಗಿ ಇದ್ದ ಕಾರಣ ಸದರಿ ವಿಷಯವನ್ನು ನಾವು ಹೇಳಿಲ್ಲ ಎಂದರೆ ಸರಿಯಲ್ಲ. ನಿಡಿಃ 1 ರಲ್ಲಿ ಸಣ್ಣತಿಮ್ಮಪ್ಪ, ಬೋಗಪ್ಪ ಮತ್ತು ಹನುಮಂತಪ್ಪ ಇವರು ಒಟ್ಟಿಗೆ ಸೇರಿದ್ದೇವು ಎಂದು ಬರೆದಿರುತ್ತಾರೆ. 3 ಜನರು ಸೇರಿ ಬೋಗಪ್ಪ ಹೆಸರಿಗೆ ಒಂದಷ್ಟು, ಹನುಮಂತಪ್ಪ ಇವನ ಹೆಸರಿಗೆ ಒಂದಷ್ಟು ಮತ್ತು ನಮ್ಮ ತಂದೆ ಸಣ್ಣತಿಮ್ಮಪ್ಪನ ಹೆಸರಿಗೆ ಒಂದಷ್ಟು ಆಸ್ತಿಗಳನ್ನು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿಯರಿಗೆ ಕೊಟ್ಟಂತಹ ಆಸ್ತಿಗಳ ಖಾತೆ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಗಳು ಬೋಗಪ್ಪನಿಗೆ ಸಂಬಂಧಪಟ್ಟವು ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಬೋಗಪ್ಪನಿಗೆ ಸಂಬಂಧಪಟ್ಟವು ಎನ್ನುವುದಕ್ಕೆ ಪಾಲುಪಟ್ಟಿಯನ್ನು ಹಾಜರುಪಡಿಸಿರುತ್ತೇವೆ. ಸದರಿ ಆಸ್ತಿಗಳು ಈಗಲೂ ಸಹ ಪೌತಿ ಖಾತೆಯಲ್ಲಿ ನನ್ನ ಹೆಸರಿನಲ್ಲಿ ಇರುತ್ತದೆ ಎನ್ನುವುದು ನಿಜ. ಸಾಕ್ಷಿ ಮುಂದುವರೆದು ಅನುಭವ ವಾದಿಯರದ್ದೇ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಆಸ್ತಿಗಳ ಮೇಲೆ ನಮ್ಮ ತಂದೆ ಕೆಲ್ಲೋಡು ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಸಾಲ ತೆಗೆದುಕೊಂಡಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ತಂದೆ ಹಿಂದೆ ಸಾಲ ತೆಗೆದುಕೊಂಡು ತೀರಿಸಿರಬಹುದು ಈಗ ಯಾವುದೇ ಬಾಕಿ ಇರುವುದಿಲ್ಲ. ಸರ್ವೆ ನಂ. 86/2 ರ ಮೇಲೆ ನಮ್ಮ ತಂದೆ ಸಾಲ ತೆಗೆದುಕೊಂಡು ತೀರಿಸಿರಬಹುದು. ಸರ್ವೆ ನಂ. 45 ರಲ್ಲಿ ನಮ್ಮ ತಂದೆ ಕೆಲ್ಲೋಡು ಸೊಸೈಟಿಯಲ್ಲಿ ಸಾಲ ತೆಗೆದುಕೊಂಡು ತೀರಿಸಿರಬಹುದು ಈಗ ಇಲ್ಲ. 1994-95 ರಲ್ಲಿ ನಮ್ಮ ತಂದೆ ಸಾಲ ತೆಗೆದುಕೊಂಡಿರುವುದು ಪಹಣಿಯಲ್ಲಿ ನಮೂದು ಇರುತ್ತದೆ ಎನ್ನುವುದು ನಿಜ. ಭಾಗ ಕೊಡದ ಕಾರಣ ನಮ್ಮ ತಂದೆ ಸದರಿ ಜಮೀನಿನ ಮೇಲೆ ಸಾಲ ತೆಗೆದುಕೊಂಡಿರುತ್ತಾನೆ ಎಂದರೆ ಸಾಕ್ಷಿ ಅವರ ಅನುಭವದಲ್ಲಿ ಇರುತ್ತವೆ ಎಂದು ಹೇಳುತ್ತಾರೆ. ಅವರು ಅನುಭವದಲ್ಲಿ ಇರುತ್ತಾರೆ ಎನ್ನುವುದಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ದಿಃ 30.12.1974 ರಲ್ಲಿ ನಿಡಿಃ 1 ನ್ನು ಬರೆದುಕೊಟ್ಟಿರುತ್ತಾನೆ. ಆಗ ನಾನು ಅಲ್ಪವಹಿ ಇದ್ದು ಹೊಸದುರ್ಗದಲ್ಲಿ ಪ್ರೌಢಶಾಲೆಯಲ್ಲಿ

ವಿದ್ಯಾಭ್ಯಾಸ ಮಾಡುತ್ತಿದ್ದೆ. ಆ ಸಮಯದಲ್ಲಿ ವ್ಯವಹಾರ ಜ್ಞಾನ ನನಗೆ ಬಂದಿರಲಿಲ್ಲ. ನಾನು ವಿದ್ಯಾಭ್ಯಾಸದಲ್ಲಿ ತಲ್ಲೀನನಾಗಿದ್ದೆ. ಆ ಕಾರಣದಿಂದ ನಿಡಿ: 1 ನ್ನು ಎಲ್ಲಿ,ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಖುದ್ದಾಗಿ ಮಾಹಿತಿ ಇಲ್ಲ ಎನ್ನುವುದು ನಿಜ. ನಮ್ಮ ದೊಡ್ಡಪ್ಪ ಬೋಗಪ್ಪ ಮೃತಪಟ್ಟ ದಿನಾಂಕ ಮತ್ತು ತಿಂಗಳು ಹೇಳಲು ಆಗುವುದಿಲ್ಲ. ನಮ್ಮ ತಾಯಿ 1991 ರಲ್ಲಿ ಮೃತಪಟ್ಟಿರುತ್ತಾಳೆ. ನಮ್ಮ ತಾಯಿ ಹಾಗೂ ವಾದಿಯರ ತಾಯಿ ಒಂದೇ ತಂದೆಯ ಮಕ್ಕಳು. ನಮ್ಮ ತಂದೆ ಮೃತಪಡುವ ಕೊನೆಯಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು. 2 ತಿಂಗಳು ಮಾತ್ರ ನಮ್ಮ ತಂದೆ ಹಾಸಿಗೆ ಇಡಿದಿದ್ದ. ಪೌತಿಖಾತೆ ಮಾಡಿಸಿಕೊಳ್ಳಲು ಮೃತಪಟ್ಟವರ ಮರಣ ಪ್ರಮಾಣ ಪತ್ರ ಬೇಕು ಎಂದರೆ ಸಾಕ್ಷಿ ಆಗ ಏನು ಕಾನೂನು ಇತ್ತು ಆ ರೀತಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಕಂದಾಯ ಇಲಾಖೆಯಲ್ಲಿ ಅರ್ಜಿಯನ್ನು ಕೊಟ್ಟು ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಸರ್ವೆ ನಂ. 279,257 ಮತ್ತು 253 ರ ಖಾತೆ ಕ್ರಯದ ಆದಾರದ ಮೇಲೆ ಬೋಗಪ್ಪನ ಹೆಸರಿಗೆ ಆಗಿರುತ್ತದೆ. ಬೋಗಪ್ಪ ಮತ್ತು ಎಸ್ ನಾಗಪ್ಪ ಜಂಟಿಯಾಗಿ ದಾವಾ 60 ನೇ ಆಸ್ತಿಯನ್ನು ಖರೀದಿಸಿದ್ದರ ಆದಾರದ ಮೇಲೆ ಬೋಗಪ್ಪ ಹೆಸರಿಗೆ ಖಾತೆ ಆಗಿತ್ತು. ಸದರಿ ಬೋಗಪ್ಪ ನ ಹೆಸರಿನಿಂದ ನಮ್ಮ ತಂದೆಯ ಹೆಸರಿಗೆ ಖಾತೆ ವರ್ಗಾವಣೆಗೆ ವಾದಿಯರು ಅನುಮತಿಯನ್ನು ಕೊಟ್ಟಿದ್ದರು. ಆ ಕುರಿತು ದಾಖಲೆ ಇರುವುದಿಲ್ಲ. ದಾವಾ 54 ರಿಂದ 56 ನೇ ಆಸ್ತಿಗಳ ಕ್ರಯಪತ್ರ ಇರುತ್ತವೆ ಎಂದರೆ ಸಾಕ್ಷಿ ದಾವಾ 56 ನೇ ಆಸ್ತಿಯ ಕ್ರಯಪತ್ರ ಮಾತ್ರ ಇರುತ್ತದೆ ಎಂದು ಹೇಳುತ್ತಾರೆ. ದಾವಾ 54 ರಿಂದ 56 ನೇ ಆಸ್ತಿಗಳು ಪಿತ್ರಾರ್ಜಿತವಾದ ಆಸ್ತಿಗಳು ಎಂದರೆ ಸಾಕ್ಷಿ ಗ್ರಾಮಠಾಣಾ ಆಸ್ತಿಗಳು ಎಂದು ಹೇಳುತ್ತಾರೆ. ದಾವಾ 51 ರಿಂದ 53 ನೇ ಆಸ್ತಿಗಳು ನಮ್ಮ ತಾತ ಬೋಗಪ್ಪನ ಹೆಸರಿಗೆ ಇರುತ್ತವೆ. ದಾವಾ 51 ರಿಂದ 53 ನೇ ಆಸ್ತಿಗಳು ಪಿತ್ರಾರ್ಜಿತವಾದ ಆಸ್ತಿಗಳು ಎನ್ನುವುದು ನಿಜ. ಸದರಿ ಆಸ್ತಿಗಳು ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಣ್ಣ ಇವರಿಗೆ ಸಂಬಂಧಪಟ್ಟ ಆಸ್ತಿಗಳು ಎನ್ನುವುದು ನಿಜ. 3 ಜನಕ್ಕೆ ಸಂಬಂಧಪಟ್ಟ ಆಸ್ತಿಗಳಾಗಿದ್ದರಿಂದ ಬೋಗಪ್ಪ ಇವನಿಗೆ ಮೃತ್ಯುಪತ್ರವನ್ನು ಬರೆದುಕೊಡುವ ಹಕ್ಕು, ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಅವರು ಬರೆದುಕೊಟ್ಟಿದ್ದಾರೆ ಕಾನೂನು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1974-75 ರವರೆಗೆ ಸರ್ವೆ ನಂ. 79/1 ರ ಖಾತೆ ತಿಮ್ಮಪ್ಪ ತಂದೆ ಬೋಗಪ್ಪ ಇವರ ಹೆಸರಿಗೆ ಖಾತೆ ಓಡುತ್ತಿತ್ತು. ವ್ಯವಸಾಯಗಾರ ಕಾಲಂ ನಲ್ಲಿ ಹನುಮಂತಪ್ಪ, ಸಣ್ಣತಿಮ್ಮಪ್ಪ ಮತ್ತು ಬೋಗಪ್ಪ ಇವರ ಹೆಸರಿಗೆ ಇತ್ತು. ತಿಮ್ಮಪ್ಪ ತಂದೆ ಬೋಗಪ್ಪ ಇವನು ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ ಇವರ ಹೆಸರಿಗೆ ಪ್ರಮಾಣ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಆ ರೀತಿ ಬರೆದುಕೊಟ್ಟ ಕುರಿತು ನೊಂದಾಯಿತ ದಾಖಲೆ ಇರುವುದಿಲ್ಲ. ಆ ಕಾರಣದಿಂದ ಬೋಗಪ್ಪ ಇವನಿಗೆ ಮರಣಶಾಸನ ಪತ್ರ ಬರೆದುಕೊಡಲು ಹಕ್ಕು, ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 79/1 ರ ಜಮೀನನ್ನು ಸಾಗುವಳಿ ಕಾಲಂನಲ್ಲಿ ತಿಮ್ಮಪ್ಪನ ಹೆಸರು 1974-75 ರವರೆಗೆ ನಿಪಿ: 84 ರಂತೆ ಇತ್ತು ಎನ್ನುವುದು ನಿಜ. ಕ್ಯಾದಿಗೆರೆ ಗ್ರಾಮದ ಸರ್ವೆ ನಂ. 20 ರಲ್ಲಿ 3 ಎಕರೆ 18 ಗುಂಟೆ ಸಿದ್ದಪ್ಪ ತಂದೆ ನಾಗಪ್ಪ, ಬೋಗಪ್ಪ ತಂದೆ ಬೋಗಪ್ಪ ಇವರ ಹೆಸರಿಗೆ ಜಂಟಿಯಾಗಿ 1979-

80 ನೇ ಸಾಲಿನವರೆಗೆ ಪಹಣಿ ಇರುತ್ತದೆ ಎನ್ನುವುದು ನಿಜ. ಸಾಕ್ಷಿಗೆ ವಾದಿಗಳ ಪರ ವಕೀಲರು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ತೋರಿಸಲಾಗಿ, ಸದರಿ ಪಹಣಿಯನ್ನು ನೋಡಿ ಜಂಟಿಯಾಗಿ ಓಡುತ್ತಿದೆ ಎಂದು ಹೇಳಿದ್ದರಿಂದ, ಸದರಿ ಪಹಣಿಯನ್ನು ನಿಪಿಃ 94 ಎಂದು ಗುರುತಿಸಲಾಯಿತು. ಸದರಿ ಆಸ್ತಿಗೆ ನಾಗಪ್ಪ ಮತ್ತು ಬೋಗಪ್ಪ ಜಂಟಿ ಮಾಲಕರು ಎನ್ನುವುದು ನಿಜ. ಆ ರೀತಿ ಜಂಟಿ ಮಾಲಕರು ಇದ್ದ ಕಾರಣ ಬೋಗಪ್ಪನಿಗೆ ಮರಣಶಾಸನಪತ್ರ ಬರೆದುಕೊಡುವ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಅವರ ಹಿಸ್ಸೆಯ ಆಸ್ತಿಯನ್ನು ಮಾತ್ರ ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಮೇಲೆ ಹೇಳಿದ ಅವರಿಬ್ಬರು ಸದರಿ ಆಸ್ತಿಯನ್ನು ಭಾಗ ಮಾಡಿಕೊಂಡಿರುವುದಕ್ಕೆ ದಾಖಲೆ ಇರುವುದಿಲ್ಲ. ನಾವು ನಿಡಿಃ 1 ನ್ನು ಸೃಷ್ಟಿ ಮಾಡಿದ್ದರಿಂದ ಅನೇಕ ತಪ್ಪುಗಳು ಎದ್ದು ಕಾಣುತ್ತಿವೆ ಎಂದರೆ ಸರಿಯಲ್ಲ. ಬೋಗಪ್ಪ ಮೃತಪಡುವ ಸಮಯದಲ್ಲಿ ಮಕ್ಕಳು ಮತ್ತು ಅಳಿಯಂದಿರು ಜೀವಂತ ಇದ್ದರು ಎನ್ನುವುದು ನಿಜ. ಬೋಗಪ್ಪ ಇವರು ಮೃತ್ಯು ಪತ್ರವನ್ನು ಬರೆಯುವ ಇಚ್ಛೆಯನ್ನು ಹೊಂದಿದ್ದರೆ ತನ್ನ ಮಕ್ಕಳಿಗೆ ಮತ್ತು ಅಳಿಯಂದಿರಿಗೆ ಬರೆಯುತ್ತಿದ್ದ ಎಂದರೆ ಸಾಕ್ಷಿ ಸ್ವ-ಇಚ್ಛೆಯಿಂದ ಮಕ್ಕಳು, ಅಳಿಯಂದಿರು ಮತ್ತು ತಂದೆ ಸೇರಿ ಬರೆದಿರುತ್ತಾರೆ ಎಂದು ಹೇಳುತ್ತಾರೆ. ವಾದಿಯರ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ನಿಡಿಃ 1 ನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬೋಗಪ್ಪ ನಾವು ಹೇಳಿದಂತೆ ಮರಣಶಾಸನ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸೃಷ್ಟಿಸಿಕೊಂಡಂತಹ ಪತ್ರ ಆಗಿದ್ದರಿಂದ, ಅವರಿಗೆ ಸೇರದ ಆಸ್ತಿಗಳು ಸಹ ಅದರಲ್ಲಿ ಸೇರಿರುತ್ತವೆ ಎಂದರೆ ಸರಿಯಲ್ಲ. ಸದರಿ ಬೋಗಪ್ಪ ಮರಣಶಾಸನ ಪತ್ರ ಬರೆದುಕೊಟ್ಟಿದ್ದರೆ ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಹನುಮಂತಪ್ಪ ಇವರ ಸಹಿ ಇರುತ್ತಿದ್ದವು ಎಂದರೆ ಸಾಕ್ಷಿ ಅವರಿಗೆ ಮಾಹಿತಿ ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 3 ನೇ ಪುಟದ 2 ನೇ ಕಂಡಿಕೆಯಲ್ಲಿ ಹೇಳಿರುವ ವಿಷಯ ಸತ್ಯವಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 3 ನೇ ಪುಟದ ಮೊದಲನೇ ಕಂಡಿಕೆಯಲ್ಲಿ ಹೇಳಿದಂತೆ ದಿಃ 21.01.1997 ರಲ್ಲಿ ಬರೆದುಕೊಟ್ಟ ಹಕ್ಕು ನಿವೃತ್ತಿ ಪತ್ರ ನೊಂದಣಿ ಆಗಿಲ್ಲ. ಆ ಕಾರಣದಿಂದ 3 ಜನರ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತುಗಳು ಆಗಿರುತ್ತವೆ ಎಂದರೆ ಸರಿಯಲ್ಲ. 1974 ರ 2 ವರ್ಷ ಮೊದಲಿನಿಂದ ಬೋಗಪ್ಪನಿಗೆ ಮಾನಸಿಕ ಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಆ 2 ವರ್ಷ ಮೊದಲು ಹಾಸಿಗೆಯನ್ನು ಹಿಡಿದಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಗಳ ಮತ್ತು 1 ರಿಂದ 8 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಬೋಗಪ್ಪ ಇವರ ಮಾನಸಿಕ ಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ನಾವು ನಿಡಿಃ 1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬೋಗಪ್ಪ ಉಪನೊಂದಣಾಧಿಕಾರಿಯವರ ಕಛೇರಿಗೆ ಬಂದಿಲ್ಲ ಹಾಗೂ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪಾಲು ವಿಭಾಗ ಪತ್ರವನ್ನು ಮಾಡಿಕೊಳ್ಳುವಾಗಿ ಒಂದೇ ಪತ್ರದಲ್ಲಿ ಎಲ್ಲರ ಭಾಗದ ಬಗ್ಗೆ ಬರೆಯುತ್ತಾರೆ ಎಂದರೆ

ಸಾಕ್ಷಿ ಆಗ ಯಾವ ರೀತಿ ರೂಢಿ ಇತ್ತೊ ಆ ರೀತಿ ಬರೆದಿರುತ್ತಾರೆ ಎಂದು ಹೇಳುತ್ತಾರೆ. ಬೋಗಪ್ಪ, ಹನುಮಂತಪ್ಪ, ಸಣ್ಣತಿಮ್ಮಪ್ಪ ಮತ್ತು ರಾಮಪ್ಪ ಇವರ ಹೆಸರಿಗೆ ಖರೀದಿ ಮಾಡಿದ ಆಸ್ತಿಗಳನ್ನು ಜಂಟಿ ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತದೆ ಎಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡುವ ಸಲುವಾಗಿ ನಾವು ಹಾಜರುಪಡಿಸಿದ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಮ್ಮ ತಂದೆ ಸಲ್ಲಿಸಿದ ಲಿಖಿತ ಹೇಳಿಕೆಯ ವಿಷಯಗಳೆಲ್ಲವು ಸಂಪೂರ್ಣವಾಗಿ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ವಾದಿಯರಿಗೆ 1/3 ಅಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **9** ರಿಂದ **11** ನೇ ಪ್ರತಿವಾದಿಗಳ ಪರ ವಕೀಲರ ಪರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.